

ಜೇನು ಪ್ರಾತ್ಯಕ್ಷಿಕೆಯೊಂದಿಗೆ ಜೇನು ವೆಂಕಟೇಶ್

ಅಷ್ಟೇ ಇರುತ್ತದೆ. 0.5 ಡಿಗ್ರಿಯೂ ವ್ಯತ್ಯಾಸವಾಗದ ಚಾಕಚಕ್ಯತೆಯನ್ನು ಅವುಗಳಲ್ಲಿ ಕಾಣಬಹುದು. ಇಂತಹ ಅದ್ಭುತ ಎಂಜಿನಿಯರಿಂಗ್ ಕೌಶಲ್ಯ ಸಾಧಿಸಿದ ಜೇನ್ನೊಣಗಳ ಪರಿಸರಸ್ನೇಹಿ ಬದುಕು ಆಶ್ಚರ್ಯ ಮೂಡಿಸುತ್ತದೆ.

ಸರ್ವ ಕೆಲಸಗಳಿಗೂ ನೀರು ಮೂಲಾಧಾರ. ಆದರೆ, ಈ ಅಪರೂಪದ ಶ್ರಮಜೀವಿಗಳು ಸಂಗ್ರಹಿಸುವ ಜೇನುತುಪ್ಪ ಕಬಳಿಸಲು ನಾವು ಎಸಗುತ್ತಿರುವ ದೌರ್ಜನ್ಯ ಮಾತ್ರ ತರಹೇವಾರಿ. ಮನುಷ್ಯನ ಈ ಆಕ್ರಮಣಶೀಲತೆಯು ಜೇನುಹುಳುಗಳ ಅಳಿವಿಗೆ ಮಾತ್ರವಲ್ಲ; ಪರಾಗಸ್ಪರ್ಶ ತಪ್ಪಿ ಅಪರೂಪದ ಸಸ್ಯಸಂಕುಲದ ಅವನತಿಗೂ ಎಡೆಮಾಡಿಕೊಡಲಿದೆ.

ಅವಳಿ ನಗರದ ಮಧ್ಯದ ಬೃಹದಾಕಾರದ ಮರಗಳಲ್ಲಿ ಎಪಿಎಸ್ ಮೆಲ್ಲಿಫೆರಾ (ಹೆಜ್ಜೇನು), ಪೊಟರೆಗಳಲ್ಲಿ ಎಪಿಸ್ ಸೆರಾನಾ ಇಂಡಿಕಾ ಹತ್ತಾರು ಸಂಖ್ಯೆಯಲ್ಲಿ ಗೂಡು ಕಟ್ಟಿರುತ್ತಿದ್ದವು. ಈಗ ಚತುಷ್ಪಥ ರಸ್ತೆಗಾಗಿ ಶತಮಾನಕ್ಕೂ ಹಳೆಯದಾದ 200ಕ್ಕೂ ಹೆಚ್ಚು ಮರಗಳನ್ನು ಮೂಲಸೌಕರ್ಯ ಅಭಿವೃದ್ಧಿ ಹೆಸರಿನಲ್ಲಿ ಕತ್ತರಿಸಲಾಗಿದೆ. ಅಕ್ಕಪಕ್ಕದ 6 ಕೆರೆಗಳು ಆಟದ ಮೈದಾನಗಳಂತಾಗಿವೆ. ನೂರಾರು ಜೇನು ಕುಟುಂಬಗಳು ಈಗ ಹೇಳ ಹೆಸರಿಲ್ಲದಂತಾಗಿವೆ.

'ಹೆಜ್ಜೇನು', ಬೃಹದಾಕಾರವಾಗಿ ಬೆಳೆಯುವ ವೃಕ್ಷಗಳ ರೆಂಬೆಕೊಂಬೆಗಳಿಗೆ ಭಾರವಾಗಿ ತೂಗುವ ಗೂಡುಗಳನ್ನು ಕಟ್ಟುತ್ತವೆ. ಇರುವೆಯ ಹುತ್ತ, ಬಿದಿರಿನ ಪೊಟರೆ, ಮಳೆ ಹೊದರಿನ ದಟ್ಟ ಆವರಣದಲ್ಲಿ ಗೂಡು ಕಟ್ಟುವವು 'ಎಪಿಎಸ್ ಸೆರೆನಾ ಇಂಡಿಕಾ' ಅಥವಾ 'ಹೊಂದೇನು'. ಪುಟ್ಟ ಗಿಡಗಂಟೆಗಳಿಗೆ ಜೋತು ಬೀಳುವ ಪುಟ್ಟ ನೊಣಗಳಿಗೆ ಕೋಲ್ಜೇನು' (ಕಡ್ಡಿಜೇನು) ಎಂಬ ಹೆಸರಿದೆ. ಇವು ಹೆಜ್ಜೇನಿಗಿಂತ ಆಕಾರದಲ್ಲಿ ಕೊಂಚ ಚಿಕ್ಕವು. ಮನೆಯ ಕಟ್ಟಡಗಳ ಮೂಲೆಗಳಲ್ಲಿ ರಂಧ್ರ ಮಾಡಿಕೊಂಡು ಪುಟ್ಟ ಸಂಸಾರ ಹೂಡುವ 'ಮೂಲಿ' ಜೇನುಗಳು ಅತ್ಯಂತ ಚಿಕ್ಕ ಜೇನುನೊಣಗಳ ಪ್ರಭೇದಕ್ಕೆ ಸೇರುತ್ತವೆ. ಅವಳಿ ನಗರದ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಎದುರಿನ ಗುಡ್ಡ, ನವಿಲೂರು ಗುಡ್ಡ, ಸಂಜೀವಿನಿ ಉದ್ಯಾನದಲ್ಲಿ ಹತ್ತಾರು ಸಂಖ್ಯೆಯಲ್ಲಿ ಈ ಕುಟುಂಬಗಳಿದ್ದವು. ಈಗ...?

ಅಭಿವೃದ್ಧಿಯ ಹೆಸರಿನಲ್ಲಿ ಅವು ಆಶ್ರಯಿಸಿದ ಬಹುತೇಕ ಎಲ್ಲ ಮರಗಳನ್ನು ಬುಡ ಸಮೇತ ನಿರ್ನಾಮ ಮಾಡಿರುವ ನಾವು, ಅಳಿದುಳಿದ ಜೇನುಗೂಡುಗಳಿಂದ ಜೇನು ಸಂಗ್ರಹಿಸುವ ಇತ್ತೀಚಿನ ಪರಿ, ಜೇನ್ನೊಣದ ಇಡೀ ಕುಟುಂಬವೇ ನಮ್ಮ ಸ್ಮಾರ್ಟ್ ಸಿಟಿ ವ್ಯಾಪ್ತಿಯಿಂದ ನಿರ್ನಾಮವಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಬೆಂಡೆ (ಕಿಡಿಯಾ ಕ್ಯಾಲಿಸಿನಾ) ಅಥವಾ ಕೌರಿ (ಹೆಲೆಕ್ಟಸ್ ಐಸೋರಾ) ಗಿಡದ ನಾರಿನಿಂದ ಹೊಸೆದ ಹಗ್ಗ ಮತ್ತು ಏಣಿ ಬಳಸಿ ರಾತ್ರಿಯ ವೇಳೆ ಹೆಜ್ಜೇನು ಬಿಡಿಸುವವರ ದಂಡೇ ಗಾಬರಿ ಹುಟ್ಟಿಸುತ್ತದೆ. ಬೀದಿ ಬದಿಗೆ ಗೂಡು ಸಮೇತ ಜೇನುತುಪ್ಪದ ಅವರ ಮಾರಾಟದ ಪರಿ ನಮ್ಮಂಥವರನ್ನು ಮಮ್ಮಲ ಮರುಗಿಸುತ್ತದೆ.

## ತರಬೇತಿಗಾಗಿ, ಸಂಪರ್ಕಿಸಿ

- ತೋಟಗಾರಿಕೆ ಇಲಾಖೆ, ಉಪ ನಿರ್ದೇಶಕರು, ಜಿಲ್ಲಾ ಪಂಚಾಯಿತಿ, ಧಾರವಾಡ – 0836 – 2746334
- ಜೇನು ವೆಂಕಟೇಶ, ತೀರ್ಥಹಳ್ಳಿ, ಶಿವಮೊಗ್ಗ – 94817 27324 / 96064 33827
- ಕೃಷ್ಣಕುಮಾರ ಭಾಗವತ, ಮಂಡ್ಯಾಳ, ಧಾರವಾಡ – 80732 75617 / 94498 09685
- ಜೇನುತುಪ್ಪ, ಜೇನು ಮೇಣದ ಮೌಲ್ಯವರ್ಧಿತ ಉತ್ಪನ್ನಗಳಿಗಾಗಿ ಬಿ. ಗೌತಮ, (ಕಾರ್ಯಾಧ್ಯಕ್ಷ), ಪಾಂಡಿಚೆರಿ ಬೀ ಕೀಪಿಂಗ್ ಕೋಆಪರೇಟಿವ್ ಸೊಸೈಟಿ, ಪಾಂಡಿಚೆರಿ 63824 51476,
- ನವೋದ್ಯಮಿ ಕು. ಸುಸ್ಮಿತಾ, (ಸಂಸ್ಥಾಪಕಿ ಹಾಗೂ ಸಿ.ಇ.ಓ.), ಶ್ರೀ ನರಿಷ್ ನೆಸ್ಟ್, ಲಾಸ್ಪ್ ಪೇಟ, ಪಾಂಡಿಚೆರಿ – 88385 61616
- ಲೇಖಕರ ಸಂಪರ್ಕ ಸಂಖ್ಯೆ: 98865 21664



## ವೈಜ್ಞಾನಿಕ ಅರಿವೇ ಇಲ್ಲ

ಗೂಡಿನ ಮೇಲ್ಭಾಗದಲ್ಲಿ (ಮೂರು ಬೊಟ್ಟು ಗಾತ್ರ) ಮಾತ್ರ ಜೇನುತುಪ್ಪ ಸಂಗ್ರಹಿಸುವ ಜೇನ್ನೊಣಗಳು, ಕೆಳ ಭಾಗದಲ್ಲಿ ಮೊಟ್ಟೆ, ಲಾರ್ವಾ, ಮರಿ ಮತ್ತು ಆಹಾರ ಸಂಗ್ರಹಣೆಯ ಕೋಣೆಗಳನ್ನು ನಿರ್ವಹಿಸುತ್ತವೆ. ಕೀಟಗಳ ಬದುಕುವ ಪರಿಯನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳುವ ಯಾವ ಪ್ರಯತ್ನವನ್ನೂ ಮಾಡದೆ, ಇಡೀ ಜೇನು ಕುಟುಂಬವನ್ನೇ ಸದೆ ಬಡಿದು ಜೇನು ಕಸಿಯುವ ಮನುಷ್ಯನ ರೀತಿಗೆ ಏನೆನ್ನುವುದು? ಅವು ಜೇನುತುಪ್ಪವನ್ನು ತಮಗಾಗಿ ಸಂಗ್ರಹಿಸುತ್ತವೆ ಹೊರತು ನಮಗಾಗಿ ಅಲ್ಲ ಎಂಬ ಸಾಮಾನ್ಯ ಜ್ಞಾನವೂ ನಮಗಿಲ್ಲದಾಯಿತೇ?

ಜೇನುಗೂಡು ಗುರುತಿಸಿ, ಏಣಿ ಜೋಡಿಸಿ, ಗೂಡಿನ ಕೆಳ ಭಾಗದ ಪದರುಗಳನ್ನು ತುಂಬಿಸಿಕೊಳ್ಳಲು ಕೌರಿ ಗಿಡದ ತೆಳು ಕಡ್ಡಿಗಳಿಂದ ಮಾಡಿದ ಬುಟ್ಟಿ (ಜೇನು ಕುರುಬರ ವಿಧಾನ ಪೂಣಿ ಎಂಬ ಹೆಸರು) ಉಪಯೋಗಿಸಲಾಗುತ್ತದೆ. ಇದಕ್ಕಾಗಿ ನಮ್ಮ ಭಾಗದಲ್ಲಿ ಬಿದಿರಿನ ಬುಟ್ಟಿ ಅಥವಾ ಅಲ್ಯೂಮಿನಿಯಂ ಡಬರಿ ಬಳಸುತ್ತಾರೆ. ಜೇನು ತುಂಬಿದ ಎರಿಗಳನ್ನು ಸಂಗ್ರಹಿಸಲು ಅಲ್ಯೂಮಿನಿಯಂ ಟಿನ್ ಡಬ್ಬಿಗಳನ್ನೂ ಉಪಯೋಗಿಸಲಾಗುತ್ತದೆ. ಜೇನುತುಪ್ಪದ ಸಗಟು